## ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 152 / 2021

**ಚಾಸಾ ಃ- 04 / ಪ್ರಾಸಾ ಃ- 04**

| | |
|---|---|
| ಹೆಸರು | ಬೀರಪ್ಪ ಬಿ |
| ತಂದೆ ಹೆಸರು | ಬೀಮಪ್ಪ |
| ವಯಸ್ಸು | 32 |
| ಉದ್ಯೋಗ | ಮುಖ್ಯ ಪೇದೆ ನಂ.272, ಮಾಗಡಿ ಪೋಲಿಸ್ ಠಾಣೆ |
| ವಿಳಾಸ | ಮಾಗಡಿ |

**ದಿನಾಂಕಃ 31.01.2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

2016 ರಿಂದ 2021 ರವರೆಗೆ ಮಾಗಡಿ ಪೋಲಿಸ್ ಠಾಣೆಯಲ್ಲಿ ಪೇದೆ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 12.12.2020 ರಂದು ನಾನು ಮತ್ತು ಚಾಸಾ ರವ1 ರು ಗ್ರಾಮಪಂಚಾಯ್ತಿ ಚುನಾವಣೆ ಸಂಬಂಧ ಗಸ್ತು ಮಾಡುತ್ತಿದ್ದಾಗ ಮಧ್ಯಹ್ನ 2.00 ಗಂಟೆ ಸುಮಾರಿಗೆ ಚಾಸಾ 1ರವರಿಗೆ ಬಾತ್ಮಿದಾರರಿಂದ ಬಾತ್ಮಿ ಬಂದಿದ್ದು ಮೊದಲಾರಯ್ಯನಪಾಳ್ಯದ ಹತ್ತಿರ ಯಾವುದೋ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ಮಾಹಿತಿ ಬಂದ ಮೇರೆಗೆ ಕೆಎ04-ಜಿ323 ಇಲಾಖಾ ವಾಹನದಲ್ಲಿ ಇಬ್ಬರು ಪಂಚರಾದ ಚಾಸಾ 2 ಮತ್ತು 3 ರವರನ್ನು ಕರೆದುಕೊಂಡು ಹೋಗಲಾಗಿ ಮೊದಲಾರಯ್ಯನಪಾಳ್ಯದ ಅರಳೀಮರದ ಹತ್ತಿರ ಒಬ್ಬ ವ್ಯಕ್ತಿಯು ಬಿಳಿ ಚೀಲದಲ್ಲಿ ಮದ್ಯವನ್ನು ತೆಗೆದುಕೊಂಡು ಹೋಗುತ್ತಿದ್ದು ಸಮವಸ್ತ್ರದಲ್ಲಿಇದ್ದ ನಮ್ಮನ್ನು ನೋಡಿ ಓಡಿಹೋಗಲು ಪ್ರಯತ್ನಿಸಿದಾಗ ಚಾಸಾ 1 ಮತ್ತು ನಾವು ಅವರನ್ನು ಬೆನ್ನಟ್ಟಿ ಹಿಡಿದು ಪಂಚರ ಸಮಕ್ಷಮದಲ್ಲಿ ಮದ್ಯವನ್ನು ಪರಿಶೀಲನೆ ಮಾಡಲಾಗಿ 90 ಎಂ ಎಲ್ ನ ಹೈವಾರ್ಡ್ಸ್ ಪಂಚ್ ವಿಸ್ಕಿಯ 75 ಟೆಟ್ರಾ ಪ್ಯಾಕುಗಳು ಹಾಗೂ 90 ಎಂ ಎಲ್ ನ 35 ಬ್ಯಾಗ್

ಪೆಪ್ಪರ್ ವಿಸ್ಕಿಯ ಟೆಟ್ರಾ ಪ್ಯಾಕುಗಳು ಹಾಗೂ 180 ಎಂ ಎಲ್ ನ 15 ಬ್ಯಾಗ್ ಪೇಪರ್ ವಿಸ್ಕಿಯ ಟೆಟ್ರಾ ಪ್ಯಾಕುಗಳು ಇದ್ದು ಪಂಚನಾಮೆಯನ್ನು 2.45 ರಿಂದ 3.30ರ ವರೆಗೆ ಜರುಗಿಸಿರುತ್ತೇವೆ. ನಂತರ 4.00 ಗಂಟೆಗೆ ಠಾಣಾ ಎಸ್ ಹೆಚ್ ಒ ರವರ ಮುಂದೆ ಹಾಜರು ಪಡಿಸಿರುತ್ತೇವೆ. ಸದರಿ ಮದ್ಯವನ್ನು ಸಾಗಿಸುತ್ತಿದ್ದ ವ್ಯಕ್ತಿಯ ಹೆಸರನ್ನು ಕೇಳಿ ತಿಳಿಯಲಾಗಿ ಆತನು ಮೊದಲಾರಯ್ಯನಪಾಳ್ಯದ ರಾಮಕೃಷ್ಣಯ್ಯ ಎಂದು ತಿಳಿಯಿತು. ಈಗ ಸಾಕ್ಷಿಗೆ ನಿಪಿ-1 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಜಪ್ತಿ ಪಡಿಸಿದ ಮದ್ಯ ವನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಮುದ್ದೆಮಾಲು 1 ರಿಂದ 4 ಅನ್ನು ತೋರಿಸಲಾಗಿ ಸದರಿ ಜಪ್ತಿ ಪಡಿಸಿಕೊಂಡ ಮದ್ಯದ ಟೆಟ್ರಾ ಪ್ಯಾಕುಗಳನ್ನು ನೋಡಿ ಗುರುತಿಸಿರುತ್ತಾರೆ. ಈ ಸಂಬಂಧ ತನಿಖೆ ಸಮಯದಲ್ಲಿ ತನಿಖಾಧಿಕಾರಿಯವರಿಗೆ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲು** ಃ- **ಶ್ರೀ. ಸಿ ಕೆ ಆರ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಚಾಸಾ 1 ರವರು ನಿಮ್ಮ ಮೇಲಾಧಿಕಾರಿಗಳು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಾಹಿತಿ ಬಂದಾಗ ನೀವು ಮತ್ತು ಚಾಸಾ 1 ರವರು ಜೊತೆಯಲ್ಲಿ ಇದ್ದಿದ್ದರ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ 1 ರವರಿಗೆ ಮಾಹಿತಿಯು ಪೋನ್ ಮೂಲಕ ಬಂದಿರುತ್ತದೆಯೋ ಅಥವಾ ಮೌಖಿಕವಾಗಿ ಬಂದಿರುತ್ತದೆಯೋ ಎಂದರೆ ಸಾಕ್ಷಿ ಚಾಸ 1 ರವರು ನಮಗೆ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ 1 ರವರಿಗೆ ಮಾಹಿತಿ ಬಂದಾಗ ನೀವು ಎಲ್ಲಿ ಇದ್ದಿದ್ದಿರಿ ಎಂದರೆ ಸಾಕ್ಷಿ ಬೈಚಾಪುರದಲ್ಲಿ ಎಂದು ನುಡಿಯುತ್ತಾರೆ. ಚಾಸಾ 2 ಮತ್ತು 3 ರವರು ನಿಮ್ಮ ಜೊತೆ ಬೈಚಾಪುರದಲ್ಲಿ ಇದ್ದಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚಾಸಾ 2 ಮತ್ತು 3 ರವರನ್ನು ಯಾರು ಕರೆದುಕೊಂಡು ಬಂದರು ಎಂದರೆ ಸಾಕ್ಷಿಯು ಚಾಸಾ 1 ರವರಿಗೆ ಮಾಹಿತಿ ಬಂದಾಗ

ಕರೆಸಿರುತ್ತಾರೆ ಎಂದು ನುಡಿಯುತ್ತಾರೆ. ಚಸಾ 2 ಮತ್ತು 3 ರವರು ಬೈಚಾಪುರ ಗ್ರಾಮದವರ ಅಥವ ಬೇರೆ ಗ್ರಾಮದವರ ಎಂದರೆ ಸಾಕ್ಷಿಯು ಬೇರೆ ಗ್ರಾಮದವರು ಎಂದು ನುಡಿಯುತ್ತಾರೆ. ಚಾಸಾ 2 ರವರು ಅರಳೀಕಟ್ಟೆದೊಡ್ಡಿ ಹಾಗೂ ಚಾಸಾ 3 ರವರು ಕಲ್ಯಾ ಗೇಟ್ ನವರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಸಾ 2 ಮತ್ತು 3 ರವರನ್ನು ಎಲ್ಲಿಂದ ಕರೆದುಕೊಂಡು ಹೋಗಿರುತ್ತೀರಿ ಎಂದರೆ ಸಾಕ್ಷಿ ಬೈಚಾಪುರದಿಂದ ಎಂದು ನುಡಿಯುತ್ತಾರೆ.

ಅರಳೀಕಟ್ಟೆ ದೊಡ್ಡಿಯು ಮಾಗಡಿಯಿಂದ ಎಷ್ಟು ದೂರ ಎಂದರೆ ಸಾಕ್ಷಿ 7-8 ಕಿ.ಮೀ. ಎಂದು ನುಡಿಯುತ್ತಾರೆ. ಕಲ್ಯಾ ಗೇಟಿ ನಿಂದ ಬೈಚಾಪುರಕ್ಕೆ 2 ಕಿ.ಮೀ. ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ 2 ಮತ್ತು 3 ರವರು ನಿಮ್ಮ ಠಾಣೆಗೆ ಆಗಾಗ್ಯೆ ಬರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಬೈಚಾಪುರ ಗ್ರಾಮದಲ್ಲಿ 500- 600 ಮನೆಗಳು ಇವೆಯೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಬೈಚಾಪುರ ಗ್ರಾಮದಲ್ಲೂ ಜನಗಳು ವಾಸ ಇದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಬೈಚಾಪುರದಿಂದ ಎಷ್ಟು ಗಂಟೆಗೆ ಹೊರಟಿರುತ್ತೀರಿ ಎಂದರೆ ಸಾಕ್ಷಿ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಬೈಚಾಪುರದಿಂದ ನೇರ ಮೊದಲಾರಯ್ಯನಪಾಳ್ಯಕ್ಕೆ ಹೋಗಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮೊದಲಾರಯ್ಯನಪಾಳ್ಯಕ್ಕೆ ಹೋದಾಗ ಎಷ್ಟು ಗಂಟೆ ಆಗಿತ್ತು ಎಂದರೆ ಸಾಕ್ಷಿ ಸುಮಾರು 2.00 ಗಂಟೆ ಎಂದು ನುಡಿಯುತ್ತಾರೆ. ಸದರಿ ಮೊದಲಾರಯ್ಯನಪಾಳ್ಯ ಗ್ರಾಮ ಇದ್ದು ಅಲ್ಲೂ ಸಹ ಜನಗಳು ವಾಸ ಇದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಆರೋಪಿಯನ್ನು ನೀವು ಎಲ್ಲಿ ನೋಡಿರುತ್ತೀರಿ ಎಂದರೆ ಸಾಕ್ಷಿ ಮೊದಲಾರಯ್ಯನಪಾಳ್ಯದಲ್ಲಿ ಎಂದು ನುಡಿಯುತ್ತಾರೆ. ಸದರಿ ಮೊದಲಾರಯ್ಯನಪಾಳ್ಯದಲ್ಲಿ ಅರಳೀ ಮರ ಇತ್ತ ಎಂದರೆ ಸಾಕ್ಷಿ ಇತ್ತು ಎಂದು ನುಡಿಯುತ್ತಾರೆ. ಸದರಿ ಅರಳೀಮರದ ಸುತ್ತಲೂ ವಾಸದ ಮನೆಗಳು ಇವೆ ಎಂದರೆ ಸಾಕ್ಷಿ ಸುಮಾರು 100- 150 ಮೀಟರ್ ದೂರದಲ್ಲಿ ಇವೆ ಎಂದು ನುಡಿಯುತ್ತಾರೆ. ಚಾಸಾ 1 ರವರು ಸದರಿ ಮೊದಲಾರಯ್ಯನಪಾಳ್ಯದವರ

ಸಹಿಯನ್ನು ಮಹಜರ್ ಗೆ ಪಡೆದಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನೀತಿ ಸಂಹಿತೆ ಜಾರಿ ಇತ್ತು ಎಂದರೆ ಸಾಕ್ಷಿ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ಚುನಾವಣಾ ಸಮಯದಲ್ಲಿ ಮಾಗಡಿಯ ಸುತ್ತಮುತ 5 ಕಡೆ ಚೆಕ್ ಪೋಸ್ಟ್ ಗಳನ್ನು ಹಾಕುತ್ತಾರೆ ಎಂದರೆ ಸಾಕ್ಷಿ ಅದರ ಬಗ್ಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಮೊದಲಾರಯ್ಯನಪಾಳ್ಯಕ್ಕೆ ಹೋಗಬೇಕಾದರೆ ಮೊದಲು ಉಪನೋಂದಣಿ ಕಛೇರಿ ನಂತರ ಬೈಚಾಪುರ , ನಂತರ ತಗ್ಗೀಕುಪ್ಪೆ ನಂತರತ ಮೊದಲಾರಯ್ಯನಪಾಳ್ಯ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಉಪನೋಂದಣಿ ಕಛೇರಿ ಬಳಿ ಚುನಾವಣಾ ಚೆಕ್ ಪೋಸ್ಟ್ ಹಾಕುತ್ತಾರೆ ಎಂದರೆ ಸಾಕ್ಷಿ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮೊದಲಾರಯ್ಯನಪಾಳ್ಯಕ್ಕೆ ಹೋಗಬೇಕಾದರೆ ಸದರಿ ಬೈಚಾಪುರ ಮತ್ತು ತಗ್ಗೀಕುಪ್ಪೆ ಮಾರ್ಗವಾಗಿ ಮಾತ್ರ ಹೋಗಬೇಕು ಬೇರೆ ದಾರಿ ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಆರೋಪಿಯು ತಪ್ಪಿಸಿಕೊಂಡು ಓಡಿಹೋಗುತ್ತಿದ್ದರು ಎಂದು ಹೇಳಿದ್ದು ಆ ಸಮಯದಲ್ಲಿ ನೀವು ಎಷ್ಟು ಜನ ಇದ್ದಿರಿ ಎಂದರೆ ಸಾಕ್ಷಿ ನಾನು , ಚಾಸಾ 1, ಚಾಸಾ 2 ಮತ್ತು 3 ರವರು ಎಂದು ನುಡಿಯುತ್ತಾರೆ. ಮುದ್ದೆಮಾಲು 1 ರಿಂದ 3 ವಿಸ್ಕಿ ಸಂಬಂಧಪಟ್ಟಿದ್ದ ಅಥವಾ ಬ್ರಾಂಡಿ ಸಂಬಂಧಪಟ್ಟಿದ್ದ ಎಂದು ಹೇಳಲು ಬರುತ್ತದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮುದ್ದೆಮಾಲು 1 ರಿಂದ 3 ಅನ್ನು ಯಾವ ಅಂಗಡಿಗೆ ಸೇರಿದ್ದು ಎಂದು ನೀವಾಗಲಿ ಅಥವಾ ಚಾಸ 1 ರವರಾಗಲಿ ತನಿಖೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮುದ್ದೆಮಾಲು 1 ರಿಂದ 3 ವಿಸ್ಕಿಗೆ ಸಂಬಂಧಪಟ್ಟಿದ್ದು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಮುದ್ದೆಮಾಲು 1 ರಿಂದ 3ಕ್ಕೆ ನೀವು ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಮಹಜರನ್ನು ಎಲ್ಲಿ ಜರುಗಿಸಿರುತ್ತೀರಿ ಎಂದರೆ ಸಾಕ್ಷಿ ಮೊದಲಾರಯ್ಯನಪಾಳ್ಯದ ಅರಳೀಮರದ ಹತ್ತಿರ ಎಂದು ನುಡಿಯುತ್ತಾರೆ. ಸದರಿ

ಸ್ಥಳದ ಚೆಕ್ಕುಬಂಧಿ ಏನು ಎಂದರೆ ಸಾಕ್ಷಿ ಪೂರ್ವ-ಪಶ್ಚಿಮ ರಸ್ತೆ, ಉತ್ತರ ಮತ್ತು ದಕ್ಷಿಣಕ್ಕೆ ಖಾಸಗಿಯವರ ಜಮೀನು ಎಂದು ನುಡಿಯುತ್ತಾರೆ. ನೀವು ಯಾವುದೇ ಸ್ಥಳಕ್ಕೆ ಹೋಗಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ ,ನಿಮ್ಮ ಇಲಾಖಾ ಅಂಕಿ ಅಂಶಕ್ಕೋಸ್ಕರ ನಿಮ್ಮ ಮೇಲಾಧಿಕಾರಿಗಳು ದಾಖಲಿಸಿಕೊಂಡಿರುವ ಸುಳ್ಳು ದೂರಿಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಜಪ್ತಿ ಪಡಿಸಿಕೊಂಡ ಮುದ್ದೆಮಾಲುಗಳಲ್ಲಿ ಮ್ಯಾಕ್ ಡೊವೆಲ್ಸ್ ಇತ್ತ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಯಾವುದೇ ತಪ್ಪನ್ನು ಮಾಡದೇ ಇದ್ದರೂ ನಿಮ್ಮ ಮೇಲಾಧಿಕಾರಿಗಳ ಮಾತನು ಕೇಳಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಚುನಾವಣಾ ಸಮಯದಲ್ಲಿ ಚೆಕ್ ಪೋಸ್ಟ್ ಗಳು ಇದ್ದವು ಒಂದು ವೇಳೆ ಆರೋಪಿಯು ಯಾವುದೇ ತಪ್ಪನ್ನು ಮಾಡಿದ್ದರೆ ಆರೋಪಿಯನ್ನು ಅವರು ಹಿಡಿಯುತ್ತಿದ್ದರು, ಆರೋಪಿಯು ಯಾವುದೇ ತಪ್ಪನ್ನು ಮಾಡಿರುವುದಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**